OS 135/2023
PW-1

ದಿನಾಂಕಃ **18.06.2026** ರಂದು ಸಾಕ್ಷಿಗೆ ಮದ್ಯಾಹ್ನ **12.05** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು**.**

**ಪಾಟೀ ಸವಾಲುಃ ಪ್ರತಿ ವಾದಿ ಪರ ಶ್ರೀ ಬಿ.ಎಸ್.ಎನ್.ಜಿ. . ವಕೀಲರಿಂದಃ**

ನಮಗೂ ಭಾಗ ಬರಬೇಕೆಂದು ಈ ದಾವೆ ಸಲ್ಲಿಸಿದ್ದೇನೆ. ದಾವಾ ಆಸ್ತಿ ಮೂಲತಃ ನನ್ನ ತಂದೆ ನಾಗಶೆಟ್ಟಿರವರದ್ದು. ಅವರಿಂದ ಪ್ರತಿವಾದಿ ಜಯಮ್ಮನವರಿಗೆ ಹೋಯಿತು. ನನ್ನ ತಾತ ಸಿದ್ದಶೆಟ್ಟಿಗೆ ನಾಗಶೆಟ್ಟಿ ಮತ್ತು ಬೆಟ್ಟಶೆಟ್ಟಿ ಎಂದು ಇಬ್ಬರು ಮಕ್ಕಳು. ನನ್ನ ತಂದೆ ಮತ್ತು ಬೆಟ್ಟಶೆಟ್ಟಿ ಯಾವಾಗ ಭಾಗ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ನಾಗಶೆಟ್ಟಿರವರಿಗೆ 4 ಜನ ಮಕ್ಕಳು ಅವರು ಅರಸಮ್ಮ, ಜಯಮ್ಮ, ರತ್ನಮ್ಮ ಮತ್ತು ಶಿವಮ್ಮ.

ವಾದಿ 1 ರಿಂದ 5 ರವರು ನನಗೆ ಯಾವುದೇ ಜಿ.ಪಿ.ಎ ಕೊಟ್ಟಿರುವುದಿಲ್ಲ. ಅವರೆಲ್ಲರ ಪರವಾಗಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ಆ ರೀತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿದ್ದೇನೆ. ನನ್ನ ತಂದೆ ನಾಗಶೆಟ್ಟಿಯವರು ದಿನಾಂಕಃ04.07.1963 ರಲ್ಲಿ ಅವರ ಇಬ್ಬರ ಹೆಂಡತಿಯರಿಗೆ ಕುಟುಂಬ ವ್ಯವಸ್ಥಾಪನ ಪತ್ರ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಮಹದೇವಮ್ಮ ಮತ್ತು ವೆಂಕಟಮ್ಮ ಎಂದು ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ 1 ನೇ ಹೆಂಡತಿಯ ಹೆಸರು ಮಹದೇವಮ್ಮ ಎಂದರೆ ಸರಿ. ನನ್ನ ತಂದೆ ಅವರ ಹೆಸರಿನಲ್ಲಿರುವ ಆಸ್ತಿಗಳನ್ನು ಕುಟುಂಬ ವ್ಯವಸ್ಥಾಪನ ಪತ್ರದ ಪ್ರಕಾರ ಅವರ ಇಬ್ಬರು ಹೆಂಡತಿಯರ ಹೆಸರಿಗೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ನಾನು ಆಗ ಹುಟ್ಟಿರಲಿಲ್ಲ.

ನನ್ನ ತಂದೆಯ ಹೆಸರಿಗೆ ಸರ್ವೆ ನಂಬರ್ 159/2 ರಲ್ಲಿ 1 ಎಕರೆ 4 ಗುಂಟೆ ಮತ್ತು 148/2 ರಲ್ಲಿ 1 ಎಕರೆ 4 ಗುಂಟೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಮಹದೇವಮ್ಮನ ಹೆಸರಿನಲ್ಲಿ ಇದ್ದು ನನ್ನ ತಾಯಿ ಮಾರಾಟ ಮಾಡಿದ್ದು ಸ.ನಂ 159/3 ಬಿ ರಲ್ಲಿ 26 ಗುಂಟೆ ಉಳಿಸಿಕೊಂಡಿದ್ದಾರೆ. ನನ್ನ ತಾಯಿ ಮತ್ತು ನನ್ನ ಅಕ್ಕ-ತಂಗಿಯರು ಸೇರಿ 40 ವರ್ಷಗಳ ಹಿಂದೆ ಸ.ನಂ 159/2, 148/2 ಮತ್ತು 203/3 ಜಮೀನುಗಳಿಗೆ ಸಂಬಂಧಿಸಿದಂತೆ ಪಂಚಾಯತ್ ಪಾರಿಕತ್ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಅರಸಮ್ಮನ ಭಾಗಕ್ಕೆ ಬಂದಿದ್ದ ಜಮೀನನ್ನು ಮಹದೇವಮ್ಮರವರಿಗೆ ದಿನಾಂಕಃ 07.07.1947 ರಂದು ಮಾರಾಟ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚಾಯತ್ ಪಾರಿಕತ್ ನಲ್ಲಿ ನಾಗಶೆಟ್ಟಿಗೆ ಸ.ನಂ. 148/2 ರ ಜಮೀನಿನಲ್ಲಿ 1 ಎಕರೆ 4 ಗುಂಟೆ ಜಮೀನು ಬಂದಿದ್ದು ಅವರು ತೀರಿಕೊಂಡ ನಂತರ ಅವನ ಹೆಂಡತಿ ರತ್ನಮ್ಮಳ ಹೆಸರಿನಲ್ಲಿ 35.04 ಗುಂಟೆ ಈಗ ಖಾತೆ ಇದೆ ಎಂದರೆ ಸರಿಯಲ್ಲ.

ಪಂಚಾಯತ್ ಪಾರಿಕತ್ ನಲ್ಲಿ ನನ್ನ ಪಾಲಿಗೆ ಸ.ನಂ 203/8 ವಿಸ್ತೀರ್ಣ 30 ಗುಂಟೆ ಬಂದಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಸಿದ್ದಶೆಟ್ಟಿಯಿಂದ ಕ್ರಯಕ್ಕೆ ತೆಗೆದುಕೊಂಡಿದ್ದೆ. ಸ.ನಂ 203/3 ಈಗ ಬದಲಾಗಿ 203/8 ಆಗಿದ್ದು ಸದರಿ ಜಮೀನಿಗೆ ಸಂಬಂಧಿಸಿದಂತೆ ಜಮೀನ ಅವನ ಪಾಲಿಗೆ ಬರಬೇಕೆಂದು ಸಿದ್ದಶೆಟ್ಟಿ ನನ್ನ ತಂದೆಯ ಮೇಲೆ ಇದೇ ನ್ಯಾಯಾಲಯದಲ್ಲಿ ದಾವಾ ಸಂಖ್ಯೆಃ 326/1995 ಎಂದು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸ.ನಂ 203/2 ಎಂದು ತಪ್ಪಾಗಿತ್ತು ನಂತರ ನಾನು ಮೇಲೆ ಹೇಳಿದ ರೀತಿ ಆಸ್ತಿ ಖರೀದಿ ಮಾಡಿದೆ. ಸಿದ್ದಶೆಟ್ಟಿ ದಾಖಲಿಸಿದ್ದ ದಾವೆ ವಜಾ ಆಯಿತು ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾವೆಯಲ್ಲಿ ನೀಡಿದ ತೀರ್ಪು ಎಂದರೆ ನನಗೆ ಗೊತ್ತಿಲ್ಲ. ಸಿದ್ದಶೆಟ್ಟಿ ರಾಮನಗರದ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಪ್ರಕರಣವನ್ನು ನಡೆಸುವುದು ಬೇಡ ರಾಜಿ ಮಾಡಿಕೊಳ್ಳೋಣ ಎಂದು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ರೀತಿ ರಾಜಿ ಮಾಡಿಕೊಂಡ ನಂತರ ನಾನು ಕ್ರಯಕ್ಕೆ ಪಡೆದ ಆಸ್ತಿಯನ್ನು ದಿನಾಂಕಃ 08.03.2021 ರಂದು ರೂಪ ಎಂಬುವರಿಗೆ ಮಾರಾಟ ಮಾಡಿದೆ ಎಂದರೆ ಸರಿ. ಅರಸಮ್ಮನ ಪಾಲಿಗೆ ಬಂದ ಆಸ್ತಿಯನ್ನು ಮಹದೇವಮ್ಮಳಿಗೆ ಆಕೆ ಮಾರಾಟ ಮಾಡಿದ್ದು, ನಾಗಶೆಟ್ಟಿ ಪಾಲಿಗೆ ಬಂದ ಆಸ್ತಿಯನ್ನು ಅವನ ಹೆಂಡತಿ ರತ್ನಮ್ಮಳ ಹೆಸರಿಗೆ ಇದ್ದು, ನನ್ನ ಪಾಲಿಗೆ ಬಂದ ಆಸ್ತಿಯನ್ನು ನಾನು ರೂಪ ಎಂಬುವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕ್ರಯಕ್ಕೆ ಪಡೆದ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ಮೇಲ್ಮನವಿಯಲ್ಲಿ ರಾಜಿ ಮಾಡಿಕೊಂಡ ನಂತರ ಪ್ರತಿವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸದರಿ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

OS 135/2023
PW-1

ನನ್ನ ತಂದೆ ತೀರಿಕೊಂಡು 22 ವರ್ಷ ಆಗಿದೆ. ಆಸ್ತಿಯಲ್ಲಿ ನನಗೆ ಪಾಲು ಇದ್ದುದ್ದರಿಂದ ರಾಜಿಯಲ್ಲಿ ಅದನ್ನು ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅರಸಮ್ಮ ಮತ್ತು ನಾಗಶೆಟ್ಟಿಗೆ ಪಾಲಿಗೆ ಹೋದ ಆಸ್ತಿಗಳನ್ನು ದಾವೆಯಲ್ಲಿ ಯಾಕೆ ಸೇರಿಸಿಲ್ಲ ಎಂದರೆ ಸೇರಿಸಿದ್ದೇನೆ. ಪ್ರತಿವಾದಿಯರ ಮೇಲಿನ ದ್ವೇಷದಿಂದ ನನ್ನ ಅಕ್ಕ ಮತ್ತು ಅಣ್ಣನ ಪಾಲಿಗೆ ಹೋದ ಆಸ್ತಿಗಳನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ದಿ.20.10.2003 ರಂದು ನನ್ನ ತಂದೆ ಒಂದು ಮೃತ್ಯುಪತ್ರವನ್ನು ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೃತ್ಯುಪತ್ರದ ಪ್ರಕಾರ ಒಂದು ಎಕರೆಯನ್ನು ನನಗೆ ಮತ್ತು ಇನ್ನೊಂದು ಎಕರೆಯನ್ನು ಪ್ರತಿವಾದಿಗೆ ಮಾಡಿದ್ದರು ಆದರೆ ನನಗೆ ಮಾಡಿದ ಆಸ್ತಿಯಲ್ಲಿ ಸಿದ್ದಶೆಟ್ಟಿಗೆ 30 ಗುಂಟೆ ಹೋಗಿದ್ದು ನಾನು ಅದನ್ನು ಖರೀದಿ ಮಾಡಿದ್ದೆ. ಮೃತ್ಯು ಪತ್ರದ ಪ್ರಕಾರ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಅರ್ಧ ಹಕ್ಕು ಇದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 203/3 ಜಮೀನನ್ನು ನಾನು ತೆಗೆದುಕೊಂಡಿದ್ದು ಉಳಿದ 26 ಗುಂಟೆ ಜಮೀನನ್ನು ಪ್ರತಿವಾದಿ ಇಟ್ಟುಕೊಳ್ಳಲೆಂದು ನಾವು ಮಾತಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿ ಬಿಟ್ಟು ನನಗೆ ಮನೆಯೂ ಇದೆ. ಸದರಿ ಆಸ್ತಿ ನನ್ನ ತಂದೆಯ ಆಸ್ತಿ ಇದ್ದು ಅದು ಒಟ್ಟು ಕುಟುಂಬದ ಅಸ್ತಿ ಆಗಿದ್ದು ಸಾಕ್ಷಿ ಮುಂದುವರೆದು ಅದನ್ನು 2ನೇ ವಾದಿಗೆ ಬಿಟ್ಟು ಕೊಟ್ಟಿದ್ದೇವೆ. ಸದರಿ ಮನೆಯನ್ನು ನಾವು ಈಗ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಇರುವ ಒಬ್ಬ ಮಗನಿಗೆ ಬಿಟ್ಟು ಕೊಟ್ಟಿದ್ದೇವೆ. ಮನೆಯ ಮುಂದೆ ಖಾಲಿ ಜಾಗ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಮಗನಿಗೆ ಬಿಟ್ಟಿದ್ದೇವೆ. ಜಯಮ್ಮಳ ಭಾಗಕ್ಕೆ ಹೋಗಿದ್ದ ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ನಾವೆಲ್ಲರೂ ಸೇರಿ ಈ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಿಜವಾಗಲೂ ಭಾಗ ಬೇಕಾಗಿದ್ದರೆ ಎಲ್ಲಾ ಆಸ್ತಿಗಳನ್ನು ಸೇರಿಸಿ ಭಾಗ ಕೇಳುತ್ತಿದ್ದೆ ಎಂದರೆ ನನ್ನ ತಂದೆ ಹೆಸರಲ್ಲಿ ಉಳಿಸಿಕೊಂಡಿರುವ ಆಸ್ತಿಗಳನ್ನು ಪ್ರತಿವಾದಿಯರು ಮೋಸದಿಂದ ತೆಗೆದುಕೊಂಡಿದ್ದರಿಂದ ಈ ದಾವೆ ಸಲ್ಲಿಸಿದ್ದೇನೆ.

OS 135/2023
PW-1

**<u>ಮರುವಿಚಾರಣೆ ಇಲ್ಲ</u>.**

**(**ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಮದ್ಯಾಹ್ನ **12.45** ಗಂಟೆವರೆಗೆ ಬೆರಳಚ್ಚು ಮಾಡಲಾಯಿತು**).**

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ.